ಕರ್ನಾಟಕ ಸರ್ಕಾರ

# ಜಿಲ್ಲಾಧಿಕಾರಿಗಳ ಕಾರ್ಯಾಲಯ, ದಾವಣಗೆರೆ ಜಿಲ್ಲೆ, ದಾವಣಗೆರೆ.

ನಂ.ಜಿ.ನ.ಕೋ.ದಾ(2)/ಸಿಆರ್/1363/2017-18 ದಿನಾಂಕ :06-02-2018

## ಅಧಿಸೂಚನೆ

ದಾವಣಗೆರೆ ಜಿಲ್ಲೆಯ ಮಹಾನಗರ ಪಾಲಿಕೆ/ ನಗರಸಭೆ/ ಪುರಸಭೆ/ ಪಟ್ಟಣ ಪಂಚಾಯಿತಿಗಳಲ್ಲಿ ದಿನಗೂಲಿ/ಗುತ್ತಿಗೆ/ಹೊರ ಗುತ್ತಿಗೆ ಹಾಗೂ ಕ್ಷೇಮಾಭಿವೃದ್ಧಿ ಇತ್ಯಾದಿ ತಾತ್ಕಾಲಿಕ ಪೌರಕಾರ್ಮಿಕರನ್ನು ಖಾಲಿ ಇರುವ ನೇರ ನೇಮಕಾತಿ ಪೌರಕಾರ್ಮಿಕರ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲು ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 126 ಟಿಎಂಎಸ್ 2016 ದಿನಾಂಕ:07-08-2017 ರಂತೆ ಕರ್ನಾಟಕ ಪುರಸಭೆಗಳ (ರಾಜ್ಯ ನಗರಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿಗಳಲ್ಲಿನ ಪೌರಕಾರ್ಮಿಕರ ನೇಮಕಾತಿ)(ವಿಶೇಷ) ನಿಯಮಗಳು 2017ರನ್ನು ಅಂತಿಮಗೊಳಿಸಿ ಅಧಿಸೂಚನೆಯನ್ನು ಹೊರಡಿಸಿದ್ದರ ಮೇರೆಗೆ ಮಹಾನಗರ ಪಾಲಿಕೆ/ ನಗರಸಭೆ/ ಪುರಸಭೆ / ಪಟ್ಟಣ ಪಂಚಾಯಿತಿಗಳಲ್ಲಿನ ಪೌರಕಾರ್ಮಿಕರ ಹುದ್ದೆಗಳನ್ನು ಸರ್ಕಾರದ ಅಧಿಸೂಚನೆಯಂತೆ ಪೌರಕಾರ್ಮಿಕರುಗಳ ಸಂಖ್ಯೆಯನ್ನು 2011ನೇ ಸಾಲಿನ ಜನಗಣತಿ ರೀತ್ಯಾ ಪ್ರತಿ 700 ಜನಸಂಖ್ಯೆಗೆ ಒಬ್ಬರಂತೆ ಸೀಮಿತಗೊಳಿಸಿ ಕರ್ನಾಟಕ ಪುರಸಭೆಗಳ 2010ರ ವೃಂದ ಮತ್ತು ನೇಮಕಾತಿ ನಿಯಮಗಳ ರೀತ್ಯಾ ಮಹಾನಗರ ಪಾಲಿಕೆ/ ನಗರಸಭೆಗಳಲ್ಲಿ ಶೇ.50 ರಷ್ಟು ಮತ್ತು ಪುರಸಭೆಗಳು ಮತ್ತು ಪಟ್ಟಣ ಪಂಚಾಯಿತಿಗಳಲ್ಲಿ ಶೇ.100 ರಷ್ಟು ಪೌರಕಾರ್ಮಿಕರ ಹುದ್ದೆಗಳನ್ನು ನೇರ ನೇಮಕಾತಿಗಳೆಂದು ಪರಿಗಣಿಸಿ ಈ ರೀತಿ ಲೆಕ್ಕಚಾರ ಮಾಡಿಕೊಂಡ ನಂತರ ನಿಗಧಿಪಡಿಸಿಕೊಂಡಿರುವ ಹುದ್ದೆಗಳಲ್ಲಿ ನೇರ ನೇಮಕಾತಿ ಹೊಂದಿ ಹಾಲಿ ಕೆಲಸ ನಿರ್ವಹಿಸುತ್ತಿರುವ ಪೌರಕಾರ್ಮಿಕರ ಸಂಖ್ಯೆಯನ್ನು ಕಳೆದು ಖಾಲಿ ಉಳಿಯುವ ಹುದ್ದೆಗಳಿಗೆ ಸರ್ಕಾರದ ವಿಶೇಷ ನೇಮಕಾತಿಗಳ ನಿಯಮಗಳ ರೀತ್ಯಾ ಖಾಲಿ ಇರುವ ಪೌರಕಾರ್ಮಿಕರ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ.

1. ಅಭ್ಯರ್ಥಿಗಳು ಪ್ರತಿ ಹುದ್ದೆಗೆ ಪ್ರತ್ಯೇಕ ಅರ್ಜಿಯನ್ನು ಸಲ್ಲಿಸತಕ್ಕದ್ದು.
2. ಅಭ್ಯರ್ಥಿಗಳು ಅರ್ಜಿಯಲ್ಲಿ ಕೋರುವ ಎಲ್ಲಾ ಮೀಸಲಾತಿ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದೊಳಗೆ, ಅಧಿಸೂಚನೆಯ ಅನುಬಂಧದಲ್ಲಿರುವ ನಮೂನೆಗಳಲ್ಲಿಯೇ ಕಡ್ಡಾಯವಾಗಿ ಪಡೆದಿಟ್ಟುಕೊಂಡಿರತಕ್ಕದ್ದು.
3. ಭರ್ತಿ ಮಾಡಿದ ಅರ್ಜಿಗಳನ್ನು ಸಲ್ಲಿಸುವ ದಿನಾಂಕ:

| ವಿವರ | ದಿನಾಂಕ | ಅರ್ಜಿ ನಮೂನೆ ಪಡೆಯುವ ವಿಳಾಸ |
|---|---|---|
| ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ | 07-02-2018 | ಮಹಾನಗರ ಪಾಲಿಕೆ/ ನಗರಸಭೆ/ಪುರಸಭೆ/ ಪಟ್ಟಣ ಪಂಚಾಯಿತಿ. |
| ಮೂಲಕ ಅರ್ಜಿ ಸಲ್ಲಿಸಲು ಹಾಗೂ ಶುಲ್ಕ ಪಾವತಿಸಲು ಕೊನೆಯ ದಿನಾಂಕ | 22-02-2018 | |

| ಕ್ರಸಂ. | ಹುದ್ದೆಯ ಹೆಸರು | ಜಿಲ್ಲೆಯಲ್ಲಿ ಖಾಲಿ ಇರುವ ಒಟ್ಟು ಹುದ್ದೆಗಳು | ಕನಿಷ್ಟ ವಿದ್ಯಾರ್ಹತೆ/ಅರ್ಹತೆ | ವೇತನ ಶ್ರೇಣಿ |
|---|---|---|---|---|
| 1 | ಪೌರ ಕಾರ್ಮಿಕರು | 186 | 1. ವಿದ್ಯಾರ್ಹತೆ ಅನ್ವಯಿಸುವುದಿಲ್ಲ.<br>2. ಕನ್ನಡ ಮಾತನಾಡಲು ಗೊತ್ತಿರಬೇಕು.<br>3. ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪೌರ ಕಾರ್ಮಿಕ ಹುದ್ದೆಯಲ್ಲಿ ಕೆಲಸ ಮಾಡು ತ್ತಿರುವ ಕ್ಷೇಮಾಭಿವೃದ್ದಿ/ದಿನಗೂಲಿ/ಗುತ್ತಿಗೆ /ಹೊರ ಗುತ್ತಿಗೆ/ಸಮಾನ ಕೆಲಸಕ್ಕೆ ಸಮಾನ ವೇತನ ಕಾರ್ಯದಡಿ ಹಾಲಿ ಕಾರ್ಯ ನಿರ್ವಹಿ ಸುತಿರುವ | ರೂ. 9600-14550 |

## 4. ಹುದ್ದೆಗಳ ವರ್ಗೀಕರಣ:

| ದಾವಣಗೆರೆ ಜಿಲ್ಲೆಯ ದಾವಣಗೆರೆ ಮಹಾನಗರ ಪಾಲಿಕೆಯಲ್ಲಿ ಖಾಲಿ ಇರುವ ಪೌರಕಾರ್ಮಿಕರು- ಸ್ಥಳೀಯ ವೃಂದದ ಒಟ್ಟು ಹುದ್ದೆಗಳ ಸಂಖ್ಯೆ: | | | | | | | | |
|---|---|---|---|---|---|---|---|---|
| ಮೀಸಲಾತಿ | ಸಾಮಾನ್ಯ | ಮಹಿಳೆ | ಗ್ರಾಮೀಣ | ಅಂ.ವಿ | ಮಾ.ಸೈ | ಕ.ಮಾ.ಅ | ಯೋ.ಅ | ಒಟ್ಟು |
| ಪ.ಜಾ | 05 | 01 | 01 | 01 | 01 | 01 | 01 | 11 |
| ಪ.ಪಂ | 01 | 01 | – | – | – | – | – | 02 |
| ಪ್ರ-1 | 02 | 01 | – | – | – | – | – | 03 |
| ಪ್ರ-2 (ಎ) | 04 | 01 | 01 | 01 | 01 | 01 | 01 | 10 |
| ಪ್ರ-2 (ಬಿ) | 02 | 01 | – | – | – | – | – | 03 |
| ಪ್ರ-3 (ಎ) | 02 | 01 | – | – | – | – | – | 03 |
| ಪ್ರ-3 (ಬಿ) | 02 | 01 | 01 | 01 | – | – | – | 05 |
| ಸಾ.ಅ | 18 | 06 | 03 | 02 | 03 | 03 | 02 | 37 |
| **ಒಟ್ಟು** | **36** | **13** | **06** | **05** | **05** | **05** | **04** | **74** |

| ದಾವಣಗೆರೆ ಜಿಲ್ಲೆಯ ಹರಿಹರ ನಗರಸಭೆಯಲ್ಲಿ ಖಾಲಿ ಇರುವ ಪೌರಕಾರ್ಮಿಕರು- ಸ್ಥಳೀಯ ವೃಂದದ ಒಟ್ಟು ಹುದ್ದೆಗಳ ಸಂಖ್ಯೆ: | | | | | | | | |
|---|---|---|---|---|---|---|---|---|
| ಮೀಸಲಾತಿ | ಸಾಮಾನ್ಯ | ಮಹಿಳೆ | ಗ್ರಾಮೀಣ | ಅಂ.ವಿ | ಮಾ.ಸೈ | ಕ.ಮಾ.ಅ | ಯೋ.ಅ | ಒಟ್ಟು |
| ಪ.ಜಾ | 01 | 01 | – | – | – | – | – | 02 |
| ಪ.ಪಂ | 01 | – | – | – | – | – | – | 01 |
| ಪ್ರ-1 | - | – | – | – | – | – | – | – |
| ಪ್ರ-2 (ಎ) | - | – | – | – | – | – | – | – |
| ಪ್ರ-2 (ಬಿ) | - | – | – | – | – | – | – | – |
| ಪ್ರ-3 (ಎ) | - | – | – | – | – | – | – | – |
| ಪ್ರ-3 (ಬಿ) | - | – | – | – | – | – | – | – |
| ಸಾ.ಅ | - | – | – | – | – | – | – | – |
| **ಒಟ್ಟು** | **02** | **01** | **-** | **–** | **–** | **–** | **–** | **03** |

| ದಾವಣಗೆರೆ ಜಿಲ್ಲೆಯ ಹರಪನಹಳ್ಳಿ ಪುರಸಭೆಯಲ್ಲಿ ಖಾಲಿ ಇರುವ ಪೌರಕಾರ್ಮಿಕರು- ಸ್ಥಳೀಯ ವೃಂದದ ಒಟ್ಟು ಹುದ್ದೆಗಳ ಸಂಖ್ಯೆ: | | | | | | | | |
|---|---|---|---|---|---|---|---|---|
| ಮೀಸಲಾತಿ | ಸಾಮಾನ್ಯ | ಮಹಿಳೆ | ಗ್ರಾಮೀಣ | ಅಂ.ವಿ | ಮಾ.ಸೈ | ಕ.ಮಾ.ಅ | ಯೋ.ಅ | ಒಟ್ಟು |
| ಪ.ಜಾ | 03 | 01 | 01 | 01 | 01 | 01 | 01 | 09 |
| ಪ.ಪಂ | 01 | – | – | – | – | – | – | 01 |
| ಪ್ರ-1 | 01 | - | – | – | – | – | – | 01 |
| ಪ್ರ-2 (ಎ) | 01 | 01 | 01 | 01 | 01 | – | – | 05 |
| ಪ್ರ-2 (ಬಿ) | 01 | – | – | – | – | – | – | 01 |
| ಪ್ರ-3 (ಎ) | 01 | – | – | – | – | – | – | 01 |
| ಪ್ರ-3 (ಬಿ) | 01 | 01 | – | – | – | – | – | 02 |
| ಸಾ.ಅ | 07 | 04 | 02 | 01 | 01 | 01 | 01 | 17 |
| **ಒಟ್ಟು** | **16** | **07** | **04** | **03** | **03** | **02** | **02** | **37** |

| ದಾವಣಗೆರೆ ಜಿಲ್ಲೆಯ ಚನ್ನಗಿರಿ ಪುರಸಭೆಯಲ್ಲಿ ಖಾಲಿ ಇರುವ ಪೌರಕಾರ್ಮಿಕರು- ಸ್ಥಳೀಯ ವೃಂದದ ಒಟ್ಟು ಹುದ್ದೆಗಳ ಸಂಖ್ಯೆ: | | | | | | | | |
|---|---|---|---|---|---|---|---|---|
| ಮೀಸಲಾತಿ | ಸಾಮಾನ್ಯ | ಮಹಿಳೆ | ಗ್ರಾಮೀಣ | ಅಂ.ವಿ | ಮಾ.ಸೈ | ಕ.ಮಾ.ಅ | ಯೋ.ಅ | ಒಟ್ಟು |
| ಪ.ಜಾ | 02 | 01 | – | – | – | – | – | 03 |
| ಪ.ಪಂ | 01 | – | – | – | – | – | – | 01 |
| ಪ್ರ-1 | 01 | – | – | – | – | – | – | 01 |
| ಪ್ರ-2 (ಎ) | 01 | – | – | – | – | – | – | 01 |
| ಪ್ರ-2 (ಬಿ) | 01 | – | – | – | – | – | – | 01 |
| ಪ್ರ-3 (ಎ) | 01 | – | – | – | – | – | – | 01 |
| ಪ್ರ-3 (ಬಿ) | 01 | 01 | – | – | – | – | – | 02 |
| ಸಾ.ಅ | 05 | 02 | 01 | 01 | 01 | – | – | 10 |
| **ಒಟ್ಟು** | **13** | **04** | **01** | **01** | **01** | **–** | **–** | **20** |

| ದಾವಣಗೆರೆ ಜಿಲ್ಲೆಯ ಮಲೇಬೆನ್ನೂರು ಪುರಸಭೆಯಲ್ಲಿ ಖಾಲಿ ಇರುವ ಪೌರಕಾರ್ಮಿಕರು- ಸ್ಥಳೀಯ ವೃಂದದ ಒಟ್ಟು ಹುದ್ದೆಗಳ ಸಂಖ್ಯೆ: | | | | | | | | |
|---|---|---|---|---|---|---|---|---|
| ಮೀಸಲಾತಿ | ಸಾಮಾನ್ಯ | ಮಹಿಳೆ | ಗ್ರಾಮೀಣ | ಅಂ.ವಿ | ಮಾ.ಸೈ | ಕ.ಮಾ.ಅ | ಯೋ.ಅ | ಒಟ್ಟು |
| ಪ.ಜಾ | 02 | 01 | – | – | – | – | – | 03 |
| ಪ.ಪಂ | 01 | – | – | – | – | – | – | 01 |
| ಪ್ರ–1 | 01 | – | – | – | – | – | – | 01 |
| ಪ್ರ–2 (ಎ) | 01 | – | – | – | – | – | – | 01 |
| ಪ್ರ–2 (ಬಿ) | 01 | – | – | – | – | – | – | 01 |
| ಪ್ರ–3 (ಎ) | 01 | – | – | – | – | – | – | 01 |
| ಪ್ರ–3 (ಬಿ) | 01 | – | – | – | – | – | – | 01 |
| ಸಾ.ಅ | 04 | 01 | 01 | 01 | – | 01 | – | 08 |
| **ಒಟ್ಟು** | **12** | **02** | **01** | **01** | **–** | **01** | **–** | **17** |

| ದಾವಣಗೆರೆ ಜಿಲ್ಲೆಯ ಹೊನ್ನಾಳಿ ಪಟ್ಟಣ ಪಂಚಾಯಿತಿಯಲ್ಲಿ ಖಾಲಿ ಇರುವ ಪೌರಕಾರ್ಮಿಕರು- ಸ್ಥಳೀಯ ವೃಂದದ ಒಟ್ಟು ಹುದ್ದೆಗಳ ಸಂಖ್ಯೆ: | | | | | | | | |
|---|---|---|---|---|---|---|---|---|
| ಮೀಸಲಾತಿ | ಸಾಮಾನ್ಯ | ಮಹಿಳೆ | ಗ್ರಾಮೀಣ | ಅಂ.ವಿ | ಮಾ.ಸೈ | ಕ.ಮಾ.ಅ | ಯೋ.ಅ | ಒಟ್ಟು |
| ಪ.ಜಾ | 02 | 01 | – | – | – | – | – | 03 |
| ಪ.ಪಂ | 01 | – | – | – | – | – | – | 01 |
| ಪ್ರ–1 | 01 | – | – | – | – | – | – | 01 |
| ಪ್ರ–2 (ಎ) | 01 | – | – | – | – | – | – | 01 |
| ಪ್ರ–2 (ಬಿ) | 01 | – | – | – | – | – | – | 01 |
| ಪ್ರ–3 (ಎ) | 01 | – | – | – | – | – | – | 01 |
| ಪ್ರ–3 (ಬಿ) | 01 | 01 | – | – | – | – | – | 02 |
| ಸಾ.ಅ | 05 | 02 | 01 | 01 | 01 | – | – | 10 |
| **ಒಟ್ಟು** | **13** | **04** | **01** | **01** | **01** | **–** | **–** | **20** |

| ದಾವಣಗೆರೆ ಜಿಲ್ಲೆಯ ಜಗಳೂರು ಪಟ್ಟಣ ಪಂಚಾಯಿತಿಯಲ್ಲಿ ಖಾಲಿ ಇರುವ ಪೌರಕಾರ್ಮಿಕರು- ಸ್ಥಳೀಯ ವೃಂದದ ಒಟ್ಟು ಹುದ್ದೆಗಳ ಸಂಖ್ಯೆ: | | | | | | | | |
|---|---|---|---|---|---|---|---|---|
| ಮೀಸಲಾತಿ | ಸಾಮಾನ್ಯ | ಮಹಿಳೆ | ಗ್ರಾಮೀಣ | ಅಂ.ವಿ | ಮಾ.ಸೈ | ಕ.ಮಾ.ಅ | ಯೋ.ಅ | ಒಟ್ಟು |
| ಪ.ಜಾ | 02 | – | – | – | – | – | – | 02 |
| ಪ.ಪಂ | 01 | – | – | – | – | – | – | 01 |
| ಪ್ರ–1 | 01 | – | – | – | – | – | – | 01 |
| ಪ್ರ–2 (ಎ) | 01 | – | – | – | – | – | – | 01 |
| ಪ್ರ–2 (ಬಿ) | 01 | – | – | – | – | – | – | 01 |
| ಪ್ರ–3 (ಎ) | 01 | – | – | – | – | – | – | 01 |
| ಪ್ರ–3 (ಬಿ) | 01 | – | – | – | – | – | – | 01 |
| ಸಾ.ಅ | 04 | 01 | 01 | 01 | – | – | – | 07 |
| **ಒಟ್ಟು** | **12** | **01** | **01** | **01** | **–** | **–** | **–** | **15** |

### 3. ಪಿಂಚಣಿ ಸೌಲಭ್ಯ:

ದಾವಣಗೆರೆ ಜಿಲ್ಲೆಯ ಮಹಾನಗರ ಪಾಲಿಕೆ/ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿತಿಗಳಲ್ಲಿ ಖಾಲಿ ಇರುವ ವಿವಿಧ 'ಡಿ' ದರ್ಜೆ ಹುದ್ದೆಗಳಿಗೆ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ (ಎಸ್‌ಪಿಎಲ್) 04 ಪಿಇಟಿ 2005,ದಿ:31-03-2006 ರಂತೆ ಎನ್‌ಪಿಎಸ್ (New Pension Scheme) ಸೌಲಭ್ಯ ಪಡೆಯಲು ಅರ್ಹರಿರುತ್ತಾರೆ.

### 4. ವಯೋಮಿತಿ:

ಅರ್ಜಿಗಳನ್ನು ಸ್ವೀಕರಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಯು ಕನಿಷ್ಠ 18 ವರ್ಷ ವಯಸ್ಸನ್ನು ಪೂರೈಸಿರತಕ್ಕದ್ದು ಹಾಗೂ ಗರಿಷ್ಠ ವಯೋಮಿತಿ ವಿವರಗಳು ಈ ಕೆಳಕಂಡಂತಿರುತ್ತದೆ.

| ಕ್ರ. ಸಂ | ಜಾತಿ/ಪ್ರವರ್ಗ | ಗರಿಷ್ಠ ವಯೋಮಿತಿ (ವರ್ಷಗಳಲ್ಲಿ) |
|---|---|---|
| 1 | ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ/ಪ್ರವರ್ಗ-1ರ ಅಭ್ಯರ್ಥಿಗಳಿಗೆ | 45 |
| 2 | ಪ್ರವರ್ಗ-2ಎ, 2ಬಿ, 3ಬಿ ಅಭ್ಯರ್ಥಿಗಳಿಗೆ | 45 |
| 3 | ಸಾಮಾನ್ಯ ಅರ್ಹತೆಯ ಅಭ್ಯರ್ಥಿಗಳಿಗೆ | 45 |

5. ನಿಗಧಿಪಡಿಸಿದ ಇನ್ನಿತರೆ ಅರ್ಹತೆಗಳು:

- ಅರ್ಜಿಗಳನ್ನು ನೇರವಾಗಿ ಸಲ್ಲಿಸಿ ಸ್ವೀಕೃತಿ ಪಡೆಯತಕ್ಕದ್ದು. ಅರ್ಜಿಗಳನ್ನು ಅಂಚೆ ಮೂಲಕ ಪ್ರತ್ಯೇಕವಾಗಿ ಸಲ್ಲಿಸಲು ಅವಕಾಶವಿರುವುದಿಲ್ಲ.
- ಅಭ್ಯರ್ಥಿಗಳು ಅರ್ಜಿಯಲ್ಲಿ ಕೋರುವ ಎಲ್ಲಾ ಮೀಸಲಾತಿ ಪ್ರಮಾಣ ಪತ್ರಗಳನ್ನು ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದೊಳಗೆ, ಅಧಿಸೂಚನೆಯ ಅನುಬಂಧದಲ್ಲಿರುವ ನಮೂನೆಗಳಲ್ಲಿಯೇ ಕಡ್ಡಾಯವಾಗಿ ಪಡೆದಿಟ್ಟುಕೊಂಡಿರತಕ್ಕದ್ದು.
- ಶೈಕ್ಷಣಿಕ/ವಿದ್ಯಾರ್ಹತೆ ದಾಖಲಾತಿಗಳು/ಆಧಾರ್‌ಕಾರ್ಡ್/ಪಡಿತರ ಚೀಟಿ/ಮತದಾರರ ಗುರುತಿನ ಚೀಟಿ/ ದಾಖಲಾತಿಗಳನ್ನು ಆಧರಿಸಿ ಅಭ್ಯರ್ಥಿಯ ವಯಸ್ಸನ್ನು ನಿರ್ಧರಿಸಲಾಗುವುದು.
- ಮೇಲ್ಕಂಡ ಯಾವುದೇ ದಾಖಲಾತಿಗಳು ಲಭ್ಯವಿಲ್ಲದೇ ಇದ್ದಲ್ಲಿ ಅಥವಾ ಸುಳ್ಳು ದಾಖಲೆ ಎಂದು ಕಂಡುಬಂದಲ್ಲಿ ಅಭ್ಯರ್ಥಿಯ ವಯಸ್ಸನ್ನು ಜಿಲ್ಲಾ ವೈದ್ಯಕೀಯ ಮಂಡಳಿ ವೈದ್ಯರ ದೃಢೀಕರಣ ಪತ್ರದ ಆಧಾರದ ಮೇಲೆ ಪರಿಗಣಿಸಲಾಗುವುದು.
- ನಗರ ಸ್ಥಳೀಯ ಸಂಸ್ಥೆಗಳಾದ ಮಹಾನಗರ ಪಾಲಿಕೆ/ನಗರಸಭೆ/ಪುರಸಭೆ/ಪಟ್ಟಣ ಪಂಚಾಯಿತಿಗಳಲ್ಲಿ ಹಾಲಿ ಕ್ಷೇಮಾಭಿವೃದ್ಧಿ/ ದಿನಗೂಲಿ/ಗುತ್ತಿಗೆ/ಹೊರಗುತ್ತಿಗೆ/ಸಮಾನ ಕೆಲಸಕ್ಕೆ ಸಮಾನ ವೇತನ/ಇತರೆ ಆಧಾರದ ಮೇಲೆ 2 ವರ್ಷಕ್ಕಿಂತ ಕಡಿಮೆ ಇಲ್ಲದೇ ನಿರಂತರವಾಗಿ ಈ ನಿಯಮಗಳಡಿ ಅರ್ಜಿ ಸಲ್ಲಿಸಲು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಮೊದಲ ಆದ್ಯತೆ ನೀಡಲಾಗುವುದು.
- ಕಡಿಮೆ ವರ್ಷ ಸಲ್ಲಿಸಿರುವವರಿಗಿಂತ, ಹೆಚ್ಚು ವರ್ಷ ಸೇವೆ ಸಲ್ಲಿಸಿದವರಿಗೆ ಮೊದಲ ಆದ್ಯತೆ ನೀಡಲಾಗುವುದು.
- ನೇಮಕಾತಿಯಲ್ಲಿನ ಆದ್ಯತೆಯನ್ನು (1) ಕ್ಷೇಮಾಭಿವೃದ್ಧಿ (2) ದಿನಗೂಲಿ (3)ಗುತ್ತಿಗೆ (4) ಹೊರಗುತ್ತಿಗೆ (5) ಸಮಾನ ಕೆಲಸಕ್ಕೆ ಸಮಾನ ವೇತನ (6) ಇತರೆ ಆಧಾರದ ಕೆಲಸ ನಿರ್ವಹಿಸುತ್ತಿರುವ ಪೌರಕಾರ್ಮಿಕರನ್ನು ಕ್ರಮವಾಗಿ ಪರಿಗಣಿಸಲಾಗುವುದು.
- ಹೊರಗುತ್ತಿಗೆ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತಿರುವ ಪೌರಕಾರ್ಮಿಕರಿಗೆ ಸಂಬಂಧಿಸಿದಂತೆ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪಾವತಿಸಲಾದ ಕಾರ್ಮಿಕರ ರಾಜ್ಯ ವಿಮೆ (ಇ.ಎಸ್.ಐ) ಮತ್ತು ಭವಿಷ್ಯ ನಿಧಿ (ಪಿ.ಎಫ್) ಹಾಜರಾತಿ ಮತ್ತು ವೇತನ ಪಡೆದ 2 ವರ್ಷದ ದಾಖಲಾತಿಗಳನ್ನು ಪರಿಗಣಿಸಲಾಗುವುದು.
- ಕ್ಷೇಮಾಭಿವೃದ್ಧಿ/ ದಿನಗೂಲಿ/ಗುತ್ತಿಗೆ/ಸಮಾನ ಕೆಲಸಕ್ಕೆ ಸಮಾನ ವೇತನ/ಇತರೆ ಆಧಾರದ ಕೆಲಸ ನಿರ್ವಹಿಸುತ್ತಿರುವ ಪೌರಕಾರ್ಮಿಕರ 2 ವರ್ಷಗಳ ಮೇಲ್ಪಟ್ಟು, ನಗರ ಸ್ಥಳೀಯ ಸಂಸ್ಥೆಗಳಿಂದ ವೇತನ ಪಡೆದ ದಾಖಲಾತಿಗಳನ್ನು ಪರಿಗಣಿಸಲಾಗುವುದು.
- 2 ಮತ್ತು ಅದಕ್ಕಿಂತ ಹೆಚ್ಚಿನಾ ಅಭ್ಯರ್ಥಿಗಳ ಸೇವಾ ಅವಧಿ ಒಂದೇ ಇದ್ದ ಪಕ್ಷದಲ್ಲಿ ಅಂತಹ ಅಭ್ಯರ್ಥಿಗಳ ಜೇಷ್ಠತೆಯನ್ನು ಅವರ ವಯಸ್ಸಿಗೆ ಅನುಗುಣವಾಗಿ ಅಂದರೆ ಹೆಚ್ಚು ವಯಸ್ಕರನ್ನು ಕಡಿಮೆ ವಯಸ್ಕರಿಗಿಂತ ಮೇಲೆ ಪರಿಗಣಿಸಲಾಗುವುದು ಹಾಗೂ ಹುಟ್ಟಿದ ದಿನಾಂಕ ಹಾಗೂ ಸೇವಾ ಅವಧಿ ಒಂದೇ ಆಗಿದ್ದಲ್ಲಿ ಲಾಟರಿ ಮುಖಾಂತರ ಪರಿಗಣಿಸಲಾಗುವುದು
- ಉಪ ನಿಯಮ (2) ರಂತೆ ಆಯ್ಕೆಯಾಗಿರುವ ಅಭ್ಯರ್ಥಿಗಳು ನಿಗಧಿತ ಅವಧಿಯೊಳಗೆ ಕರ್ತವ್ಯಕ್ಕೆ ವರದಿ ಮಾಡಿಕೊಳ್ಳದೇ ಇದ್ದಲ್ಲಿ, ಸದರಿ ಅಭ್ಯರ್ಥಿಯ ಬದಲಾಗಿ ಅದೇ ಪ್ರವರ್ಗದ ಮೀಸಲಾತಿಯಲ್ಲಿ ಹೆಚ್ಚುವರಿ ಪಟ್ಟಿಯಲ್ಲಿ ಆಯ್ಕೆಯಾಗಿರುವ ಮತ್ತೊಬ್ಬ ವ್ಯಕ್ತಿಯನ್ನು ಪರಿಗಣಿಸಲಾಗುವುದು.
- ಆಯ್ಕೆ ಮಾಡಲಾದ ಅಭ್ಯರ್ಥಿಗಳ ಪಟ್ಟಿಯು ಗುರುತಿಸಲಾದ ಖಾಲಿ ಹುದ್ದೆಗಳು ಭರ್ತಿಯಾಗುವವರೆಗೆ ಅಥವಾ ಆಯ್ಕೆ ಪಟ್ಟಿಯು ಪ್ರಕಟವಾದ 1 ವರ್ಷದ ಅವಧಿಯವರೆಗೆ ಯಾವುದು ಮೊದಲೋ ಅಲ್ಲಿಯವರೆಗೆ ಚಾಲ್ತಿಯಲ್ಲಿರುತ್ತದೆ.
- ಅಭ್ಯರ್ಥಿಯು ಭಾರತೀಯ ನಾಗರಿಕನಾಗಿರತಕ್ಕದ್ದು.
- ಅಭ್ಯರ್ಥಿಗಳು ಮಾನಸಿಕವಾಗಿ ಮತ್ತು ದೈಹಿಕವಾಗಿ ಆರೋಗ್ಯವಂತರಾಗಿರಬೇಕು ಮತ್ತು ಅವರ ನೇಮಕಾತಿಯು ಕರ್ತವ್ಯಗಳ ದಕ್ಷ ನಿರ್ವಹಣೆಗೆ ಆತಂಕವನ್ನುಂಟು ಮಾಡುವ ಸಂಭವ ಇರುವ ಯಾವುದೇ ದೈಹಿಕ ನ್ಯೂನ್ಯತೆಯಿಂದ ಮುಕ್ತರಾಗಿರಬೇಕು.

ಅಧ್ಯಕ್ಷರು,
ಆಯ್ಕೆ ಮತ್ತು ನೇರ ನೇಮಕಾತಿ ಪ್ರಾಧಿಕಾರ
ಹಾಗೂ ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ.

ಯಥಾ ಪ್ರತಿಗಳನ್ನು:

1. ಆಯುಕ್ತರು, ಮಹಾನಗರ ಪಾಲಿಕೆ, ದಾವಣಗೆರೆ ರವರಿಗೆ ಅಗತ್ಯ ಕ್ರಮಕ್ಕಾಗಿ ಹಾಗೂ ತಮ್ಮ ಕಛೇರಿ ಸೂಚನಾ ಫಲಕಗಳಲ್ಲಿ ಪ್ರಕಟಿಸಲು ಕೋರಿದೆ.
2. ಪೌರಾಯುಕ್ತರು, ನಗರಸಭೆ, ಹರಿಹರ ರವರಿಗೆ ಅಗತ್ಯ ಕ್ರಮಕ್ಕಾಗಿ ಹಾಗೂ ತಮ್ಮ ಕಛೇರಿ ಸೂಚನಾ ಫಲಕಗಳಲ್ಲಿ ಪ್ರಕಟಿಸಲು ಕೋರಿದೆ.
3. ಮುಖ್ಯಾಧಿಕಾರಿ, ಪುರಸಭೆ, ಹರಪನಹಳ್ಳಿ/ಚನ್ನಗಿರಿ/ಮಲೇಬೆನ್ನೂರು ಅಗತ್ಯ ಕ್ರಮಕ್ಕಾಗಿ ಹಾಗೂ ತಮ್ಮ ಕಛೇರಿ ಸೂಚನಾ ಫಲಕಗಳಲ್ಲಿ ಪ್ರಕಟಿಸಲು ಕೋರಿದೆ.
4. ಮುಖ್ಯಾಧಿಕಾರಿ, ಪಟ್ಟಣ ಪಂಚಾಯಿತಿ, ಹೊನ್ನಾಳಿ/ಜಗಳೂರು ಅಗತ್ಯ ಕ್ರಮಕ್ಕಾಗಿ ಹಾಗೂ ತಮ್ಮ ಕಛೇರಿ ಸೂಚನಾ ಫಲಕಗಳಲ್ಲಿ ಪ್ರಕಟಿಸಲು ಕೋರಿದೆ.

ಅಧ್ಯಕ್ಷರು,
ಆಯ್ಕೆ ಮತ್ತು ನೇರ ನೇಮಕಾತಿ ಪ್ರಾಧಿಕಾರ
ಹಾಗೂ ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ.